ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 1

ಸಂಖ್ಯೆ: ಇ-ಆಡಳಿತ ಶಿಕ್ಷಕರ ಮಾಹಿತಿ 01/2017-18 ದಿನಾಂಕ: 23.10.2017

**ವಿಶೇಷ ಗಮನಕ್ಕಾಗಿ**

**ಸುತ್ತೋಲೆ**

ವಿಷಯ: ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸೇವಾ ಮಾಹಿತಿಗಳನ್ನು **Teacher's Data Capture Software** ತಂತ್ರಾಂಶದಲ್ಲಿ ಅಳವಡಿಸುವ ಬಗ್ಗೆ

ಉಲ್ಲೇಖ: ಈ ಕಛೇರಿಯ ಸಮ ಸಂಖ್ಯೆ ಸುತ್ತೋಲೆ ದಿನಾಂಕ: 08.09.2017

ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಬೋಧಕ ಗ್ರೂಪ್ ಬಿ ಅಧಿಕಾರಿಗಳ ಸೇವಾ ಮಾಹಿತಿಗಳನ್ನು **Teacher's Data Capture Software** ತಂತ್ರಾಂಶದಲ್ಲಿ ಅಳವಡಿಸುವ ಕಾರ್ಯ ಮುಕ್ತಾಯವಾಗಿದೆ.

ಉಲ್ಲೇಖಿತ ಈ ಕಛೇರಿಯ ಸುತ್ತೋಲೆಯಲ್ಲಿ ಪ್ರಸ್ತಾಪಿಸಿದಂತೆ, ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರ ಲಾಗಿನ್‌ನಲ್ಲಿ ಬ್ಲಾಕ್‌ವಾರು ಪ್ರತಿ ಶಿಕ್ಷಕರ ಮಾಹಿತಿಯನ್ನು ಆಯ್ಕೆ ಮಾಡಿ **View Details** ನಲ್ಲಿ ಪರಿಶೀಲಿಸಿಕೊಂಡು, ಜಿಲ್ಲಾ ಉಪನಿರ್ದೇಶಕರ ಹಂತದಲ್ಲಿ **TDS** ತಂತ್ರಾಂಶದಲ್ಲಿ **Approve** ಮಾಡಲು ಸೂಚಿಸಿದೆ. ಪ್ರತೀ ಶಿಕ್ಷಕರು **TDS** ತಂತ್ರಾಂಶದ ಲಾಗಿನ್‌ಪೇಜ್‌ನಲ್ಲಿ **Teacher Button** ಆಯ್ಕೆ ಮಾಡಿಕೊಂಡು, **KGID No** ಅನ್ನು ಲಾಗಿನ್ ಆಗಿ, **OTP** ಯನ್ನು **Password** ಆಗಿ ಬಳಸಿಕೊಂಡು ಲಾಗಿನ್ ಆಗಿ ಈಗಾಗಲೇ ಅಳವಡಿಸಿರುವ ಮಾಹಿತಿಯಲ್ಲಿ ಪರಿಶೀಲಿಸಲು ಸೂಚಿಸಲಾಗಿದೆ.

ಆದರೆ ಈವರೆವಿಗೂ ಸದರಿ ಕಾರ್ಯವನ್ನು ಪೂರ್ಣಗೊಳಿಸದೇ ಇರುವುದನ್ನು ಗಮನಿಸಲಾಗಿದ್ದು, ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಪ್ರತೀ ಶಿಕ್ಷಕರು ತಮ್ಮ ಸೇವಾ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸಿರುವುದನ್ನು ಸರಿಯಾಗಿದೆ ಎಂದು ದೃಢೀಕರಿಸುವುದು ಅತ್ಯಾವಶ್ಯಕವಾಗಿದೆ. ಈಗಾಗಲೇ ಸಾಕಷ್ಟು ವಿಳಂಬವಾಗಿರುವುದರಿಂದ, ಈವರೆವಿಗೂ ಸೇವಾ ಮಾಹಿತಿಯನ್ನು ಅಳವಡಿಸಿದ ಹಾಗೂ ಸೇವಾ ಮಾಹಿತಿಯು ಸರಿಯಾಗಿದೆ ಎಂದು ದೃಢೀಕರಿಸದ ಶಿಕ್ಷಕರುಗಳು ಕೂಡಲೇ ಕ್ರಮವಹಿಸುವುದು.

ಈ ವಿಚಾರವನ್ನು ಸಂಬಂದಪಟ್ಟ ಶಿಕ್ಷಕರ ಗಮನಕ್ಕೆ ತರಲು ಈ ಮೂಲಕ ಸೂಚಿಸಿದೆ. ತಪ್ಪಿದ್ದಲ್ಲಿ ಅಂತಹ ಶಿಕ್ಷಕರ ಡಿಸೆಂಬರ್ 2017 ರ ವೇತನವನ್ನು ತಡೆಹಿಡಿಯಲು ಕ್ರಮವಹಿಸಲಾಗುವುದು ಎಂದು ಈ ಮೂಲಕ ತಿಳಿಸಿದೆ.

(ಡಾ: ಪಿ.ಸಿ.ಜಾಫರ್)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

**ಇವರಿಗೆ**

1. ನಿರ್ದೇಶಕರು. ಎಸ್.ಎಸ್.ಎ./ ಆರ್.ಎಂ.ಎಸ್.ಎ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
2. ಅಪರ ಆಯುಕ್ತರು, ಗುಲ್ಬರ್ಗಾ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
3. ಅಪರ ಆಯುಕ್ತರು ದಾರವಾಡ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
4. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.